Sri SIDDAIAH KASHIMATH.—Is there any restriction to start the Khandsari Sugar Industry in the State ?

Sri M. RAJASEKHARA MURTHY.—There is no restriction provided that is not going to affect the existing sugar factory in that area.

ಶ್ರೀ ಎಸ್. ಭೀಮಣ್ಣ.—ಸ್ವಾಮಿ, ತಾವು ಕೊಟ್ಟಿರುವ ಸ್ಟೇಟ್‌ಮೆಂಟನ್ನು ನೋಡಿದರೆ 1961 ರಿಂದ 1969ನೆ ಇಸವಿಗೂ ಅರಿಟ್‌ಮೆಂಟ್ ಎಷ್ಟು ರಿಲೀಸ್ ಆಗಿವೆ ಎನ್ನುವುದನ್ನು ನೋಡಿದರೆ ಗೊತ್ತಾಗುತ್ತದೆ. 1961 ರಿಂದ 1967ರವರೆಗೂ ಒಂದು ಲಕ್ಷ ಚಿಲ್ಲರೆ ಟನ್ ಸಕ್ಕರೆ ಡಿಸ್ಟ್ರಿಬ್ಯೂಟ್ ಆಗುತ್ತಿದ್ದು 1968ರಲ್ಲಿ 60 ಸಾವಿರಕ್ಕೆ ಇಳಿದಿದೆ. ಅರ್ಧದಷ್ಟು ಕಡಿಮೆಯಾಗಿರುವುದಕ್ಕೆ ಕಾರಣವೇನು ?

ಶ್ರೀ ಎಂ. ರಾಜಶೇಖರಮೂರ್ತಿ.—1967-68ರಲ್ಲಿ ಇಂಡಿಯಾದೇಶದಲ್ಲಿ ಎಲ್ಲಾ ಕಡೆಯೂ ಸರಿಯಾಗಿ ಮಳೆ ಬಾರದೆ ಬೆಳೆ ಕಡಿಮೆ ಆದುದ್ದರಿಂದ ಸಕ್ಕರೆ ಉತ್ಪಾದನೆ ಕಡಿಮೆ ಆಯಿತು. ಆದ್ದರಿಂದ 1968ರಲ್ಲಿ ಕಡಿಮೆ ಹಂಚಿಕ್ಕೆಯಾದರೆ 1968-69ರಲ್ಲಿ ಸಕ್ಕರೆ ಪ್ರೊಡಕ್ಷನ್ ಜಾಸ್ತಿ ಆಗಿರುವುದರಿಂದ 1969 ಜುಲೈ, ಆಗಸ್ಟ್ ತಿಂಗಳುಗಳಲ್ಲಿಯೇ 43600 ಟನ್ ಹಂಚಿಕ್ಕೆಯಾಗಿದೆ.

Bills drawn towards Relief Works in Arkalgud

106. Sri H. N. NANJE GOWDA (Arkalgud).—

Will the Minister for Revenue be pleased to state :—

(*a*) whether a letter dated 22nd April 1969 was addressed to the Relief Commissioner-*cum*-Secretary to Government, Revenue Department by a member of this House wherein it was brought to the notice of Government a few instances of bogus and fantastic bills drawn towards the Relief works non-executed and executed in Arkalgud taluk, Hassan District ;

(*b*) whether the Deputy Commissioner, Hassan or the Divisional Commissioner, Mysore have inquired into the misuse of Relief funds in Arkalgud taluk, referred to in the said letter ;

(*c*) if so, the recommendations of the said officers in the matter ;

(*d*) whether Government have appointed a special squad to go into the details of the Relief works executed in Arkalgud taluk ;

(*e*) whether any of the officers who were in charge of the relief works in Arkalgud taluk are kept under suspension ?

Sri H. V. KOUJALGI (Minister for Revenue).—

(*a*) Yes.

(*b*) Yes ; both of them.

(*c*) The Divisional Commissioner, Mysore recommended to refer the matter to the Technical Audit Cell of the State Vigilance Commission

(*d*) The matter has been referred to the State Vigilance Commission and is under investigation by its Technical Audit Cell.

(*e*) Does not arise in view of the reply to clause (*d*).

Sri H. N. NANJE GOWDA.—In answer to (*d*) the matter has been referred to the State Vigilance Commission and is under investigation by its Technical Audit Cell ಎಂದು ಹೇಳಿದೆ. ನನ್ನ ಗಮನಕ್ಕೆ ಬಂದಹಾಗೆ ಕೆಲಸ ಮಾಡದೆ ಬಿಲ್ ತೆಗೆದುಕೊಂಡದ್ದು 8 ಪ್ರಕರಣಗಳು ಮತ್ತು ಕೆಲಸ ಮಾಡಿದರೂ ಫೆಂಟಾಸ್ಟಿಕ್ ಬಿಲ್ಲು ಮಾಡಿದ 7 ಪ್ರಕರಣಗಳು ಇವೆ. ಇಷ್ಟನ್ನು ಮಾತ್ರ ಇನ್‌ವೆಸ್ಟಿಗೇಟ್ ಮಾಡಲು ಹಾಕಿದ್ದೀರಾ ಅಥವಾ ಇಡೀ ತಾಲ್ಲೂಕಿಗೆ ಸಂಬಂಧಪಟ್ಟಂತೆ ರಿಲೀಫ್ ವರ್ಕ್ಸ್ ನಡೆದಿರುವಂಥ ಎಲ್ಲ ಬಿಲ್ಲನ್ನು ಇನ್‌ವೆಸ್ಟಿಗೇಷನ್ ಮಾಡಲು ಹಾಕಿದ್ದೀರಾ?

Sri H. V. KOUJALGI.—The Divisional Commissioner, of course, had received some information from the hon. Member that is, making allegations that works were not done, etc. He has made a tour in that particular taluk and wherever he has suspected that the works were not properly carried out, all such works were referred.

ಶ್ರೀ ಎಚ್. ಎನ್. ನಂಜೇಗೌಡ.—ನಾನು ಕೇಳತಕ್ಕದ್ದು ಯಾರಾದರೂ ಸರ್ಕಾರದ ಗಮನಕ್ಕೆ ತಂದರೆ ಮಾತ್ರ ಸೂಪರ್‌ವೈಸ್ ಮಾಡಿ ಹಣ ದುರುಪಯೋಗವಾಗಿದೆ ಎಂದು ತಿಳಿದುಕೊಳ್ಳುತ್ತಾರೆಯೇ? ಒಂದು ತಾಲ್ಲೂಕಿನಲ್ಲಿ 500 600 ಕೆಲಸಗಳು ನಡೆಯುತ್ತಿದ್ದರೆ ಅದನ್ನು ಅಲ್ಲಿರುವ ನದಸ್ಯರು ಇನ್‌ವೆಸ್ಟಿಗೇಟ್ ಮಾಡುವುದಕ್ಕೆ ಆಗುವುದಿಲ್ಲ. It is proved that fun is given are misused by the agency. We want to know the details in regard to it

Sri H. V. KOUJALGI.—All such works that have been carried out have been inspected by the Tahsildar, the Assistant Commissioner and the Deputy Commissioner in certain proportion like 10 per cent, 25 per cent and 50 per cent. The hon. Member has complained that funds have been misused. The Officers concerned will have to find out whether there is any foul play. If it is so, this will have to be rectified. This is being investigated.

ಶ್ರೀ ಎಚ್. ಬಿ. ಜ್ವಾಲನಯ್ಯ.—ಡಿವಿಜನರ್ ಕಮಿಷನರು ಟೆಕ್ನಿಕಲ್ ಆಡಿಟ್ ಸೆಲ್‌ಗೆ ಕಳಿಸಿ ಕೊಡಬೇಕೆಂದು ಸಿಫಾರಸು ಮಾಡಿರುವುದಾಗಿ ಹೇಳಿದ್ದಾರೆ. ಹಾಗಾದರೆ ಹಾಸನ ಜಿಲ್ಲಾಧಿಕಾರಿಗಳು ಮತ್ತು ಮೈಸೂರು ಡಿವಿಜನರ್ ಕಮಿಷನರು ಈ ಕೆಲಸಗಳಲ್ಲಿ ಮೋಸ ಮತ್ತು ಅನ್ಯಾಯವಾಗಿದೆ ಎಂದು ಗೊತ್ತು ಮಾಡಿದಮೇಲೆ ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದಾರೆಯೇ? ಸರ್ಕಾರ ಇಂಥ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಏಕೆ ಮನಸ್ಸು ಮಾಡಲಿಲ್ಲ?

Sri H. V. KOUJALGI.—Such steps will have to be taken after receiving the preliminary report from the concerned Inspecting Officer.

ಶ್ರೀ ಬಿ. ಭಾಸ್ಕರಶೆಟ್ಟಿ.—ಮೋಸದ ಮತ್ತು ವಿಚಿತ್ರ ರೀತಿಯ ಬಿಲ್ಲುಗಳನ್ನು ತಯಾರು ಮಾಡಿದ್ದಾರೆಂದುದಾಗಿ ಹೇಳಿದ್ದಾರೆ. ಆ ಅವ್ಯವಹಾರಗಳ ಸ್ವರೂಪವೇನು? ಎಷ್ಟು ಹಣ ಹೋಗಿದೆ ಮತ್ತು ಯಾವ ರೀತಿಯ ಅವ್ಯವಹಾರಗಳನ್ನು ಮಾಡಿದ್ದಲ್ಲರು.

Sri H. V. KOUJALGI.—In the form of allegation I cannot say what is the exact fraud or deceit committed.

Sri S. SHIVAPPA.—The Divisional Commissioner has recommended that the case may be referred to the Technical Audit Cell. When the Divisional Commissioner has made out a *prima facie* case, it means that there is some misuse of funds allotted for relief works. Therefore, it is the duty of the Government to keep the officers involved under suspension to make room for smooth and impartial enquiry. Is it not correct to do so?

Sri H. V. KOUJALGI.—It would be premature to suspend them. As soon as the preliminary report is received, action will be taken.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಮೋಸದ ಮತ್ತು ವಿಚಿತ್ರ ರೀತಿಯ ಬಿಲ್ಲು ಗಳನ್ನು ತಯಾರು ಮಾಡಿ ಹಣ ಪಡೆದಿದ್ದಾರೆ ಎನ್ನುವ ಕೆಲವು ಘಟನೆಗಳು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಇಂಥ ಮೋಸದ ಮತ್ತು ವಿಚಿತ್ರ ರೀತಿಯ ಅಪಾದನೆಗಳು ಯಾವುವು ಮತ್ತು ಇದರ ಬಗ್ಗೆ ಡಿವಿಜನಲ್ ಕಮಿಷನರು ಮತ್ತು ಡೆಪ್ಯುಟಿ ಕಮಿಷನರು ಮಾಡಿರುವ ಸಿಫಾರಸು ಗಳೇನು ?

Sri H. V. KOUJALGI.—The allegations are that the measurements are wrong, some works have not been done and the work done in some place is shown in some other place. These are the nature of the allegations. As long as the allegations are pending investigation and as long as the finding is not received in this regard, the allegations connot be considered to be true.

ಶ್ರೀ ಬಿ. ದೊಡ್ಡಬೋರೇ ಗೌಡ.—ಮೈಸೂರು ರಾಜ್ಯದಲ್ಲಿ ಕ್ಷಾಮ ಪರಿಹಾರ ಕಾರ್ಯಗಳಲ್ಲಿ ಎಷ್ಟು ಹಣ ದುರುಪಯೋಗವಾಗಿವೆ ಮತ್ತು ಇದರ ಬಗ್ಗೆ ಇದುವರೆಗೆ ಏನಾದರೂ ಎನ್‌ಕ್ವೈರಿ ಮಾಡಲಾಗಿದೆಯೇ ?

Sri H. V. KOUJALGI.—It cannot be stated now what amount has been misappropriated last year. But complaint has been received. Steps will be taken as soon as the report is received.

ಶ್ರೀ ಎಂ. ಬಸವರಾಜು.—ಇಂಥ ಆಕ್ಷೇಪಣೆಗಳು ಬಂದಾಗ ನಿಷ್ಪಕ್ಷಪಾತವಾದ ಇನ್‌ವೆಸ್ಟಿ ಗೇಷನ್ ಆಗಬೇಕು. ಈ ದೃಷ್ಟಿಯಿಂದ ಸಂಬಂಧಪಟ್ಟ ಅಧಿಕಾರಿಯನ್ನು ವರ್ಗಮಾಡುವುದು ನೂಕ್ಕವಲ್ಲವೇ ? ಆ ರೀತಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

Sri H. V. KOUJALGI.—In many cases they have been transferred.

ಶ್ರೀ ಎನ್. ಜಿ. ಹಾಲಪ್ಪ.—ವಿಜಿಲೆನ್ಸ್ ಕಮಿಷನ್ನಿಗೆ ರೆಫರ್ ಮಾಡಿ ಇನ್‌ವೆಸ್ಟಿಗೇಷನ್ ಆಗುತ್ತಿರುವುದು ಯಾವ ಸ್ಟೇಜಿನಲ್ಲಿದೆ ?

Sri H. V. KOUJALGI.—I do not know in what stage it is pending.

ಶ್ರೀ ಕೆ. ಎಸ್. ವೀರಪ್ಪಗೌಡ.—ಈ ಪರಿಹಾರ ನಿಧಿಯಲ್ಲಿ ವಿಪರೀತ ಹಣ ದುರುಪಯೋಗ ವಾಗಿದೆಯೆಂದು ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕುಬೋರ್ಡ್ ಪ್ರಸಿಡೆಂಟರು ಹೇಳಿರುವ ಬಗ್ಗೆ ಎನ್‌ಕ್ವೈರಿ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆಯೇ ?

Sri H. V. KOUJALGI.—I cannot reply this question. Unless a separate question is put I cannot answer.

ಶ್ರೀ ಎಚ್. ಎನ್. ನಂಜೇಗೌಡ.—ತಾಲ್ಲೂಕುಬೋರ್ಡ್ ನೂಪರ್‌ವೈಜರನ್ನು ಸಸ್ಪೆಂಡ್ ಮಾಡಬೇಕೆಂದು ಡಿವಿಜನಲ್ ಕಮೀಷನರು ರೆಕಮೆಂಡ್ ಮಾಡಿದರೆ ಪಬ್ಲಿಕ್ ವರ್ಕ್ಸ್ ಇಲಾಖೆ ಮಂತ್ರಿಗಳು ಪ್ರಭಾವ ಬೀರಿ ಅದನ್ನು ನಿಲ್ಲಿಸಿರುವುದು ಗಮನಕ್ಕೆ ಬಂದಿದೆಯೇ ?

Sri H. V. KOUJALGI.—I do not think that such a thing has happened.

Sri H. N. NANJE GOWDA.—I have learnt that the Divisional Commissioner has recommended the suspension of that particular Supervisor of the Taluk Board. Is it not correct, Sir ?

(No answer)

ಶ್ರೀ ಎಚ್. ಬಿ. ಜ್ವಾಲನಯ್ಯ.—ಡಿವಿಜನಲ್ ಕಮೀಷನರ ವರದಿಯನ್ನು ನಭೆಯುಮುಂದೆ ಮಂಡಿಸಬೇಕು.

(ಉತ್ತರವಿಲ್ಲ)

Sri S. SIVAPPA.—The recommendation of the Divisional Commissioner should be placed on the Table of the House. They cannot hide the fact.

Mr. SPEAKER.—Will the hon. Minister place it on the Table of the House ?

Sri H. V. KOUJALGI.—I do not think there is any necessity to place it on the Table of the House when the matter is pending before the Vigilance Commissioner.

Promotions in the Office of the Inspector General of Registration and Commissioner of Stamps

176. Sri C. R. RANGE GOWDA (Magadi).—

Will the Minister for Revenue be pleased to state :—

(*a*) whether a combined seniority list of I Division Clerks in the Office of the Inspector General of Registration and Commissioner of Stamps in Mysore, Bangalore was prepared and revised as on 1st January 1968 in accordance with the seniority rules and Standing Government Orders ;

(*b*) if so, the number of times the list were prepared and revised during the last five years ;

(*c*) the basis on which the promotions were made in that office ;

(*d*) whether any complaints have been received about the irregular promotions ?

Sri H. V. KOUJALGI (Minister for Revenue).—

(*a*) Yes.

(*b*) Twice.

(*c*) Promotions were made as per rules then in force.

(*d*) Yes.

ಶ್ರೀ ಸಿ. ಆರ್. ರಂಗೇಗೌಡ.—ಇಲಾಖೆಯಲ್ಲಿರುವ ಪ್ರೊವೀಷನಲ್ ಲಿಸ್ಟ್ ಪ್ರಕಾರ ಪ್ರಮೋಷನ್ ಕೊಡದೆ ಪ್ರಮೋಷನ್ ಮಾರಾಟಮಾಡುತ್ತಿರುವುದು ಗಮನಕ್ಕೆ ಬಂದಿದೆಯೇ ?

Sri H. V. KOUJALGI.—I do not accept that allegation.

ಶ್ರೀ ಸಿ. ಆರ್. ರಂಗೇಗೌಡ.—ಎಲ್ಲರಿಗೂ ಗೊತ್ತಿರುವ ವಿಷಯ ಸರಕಾರಕ್ಕೆ ಗೊತ್ತಿಲ್ಲ, ಇದೊಂದು ಸಮಸ್ಯೆಯಾಗಿದೆ. ಒಂದು ಲಿಸ್ಟ್ ಮಾಡಿದ್ದಾರೆ, 8 ಜಾಗಗಳು ಖಾಲಿ ಇದೆ. ಆ ಜಾಗಗಳನ್ನು ಲಿಸ್ಟ್ ಪ್ರಕಾರ ಈಗೇಕೆ ಭರ್ತಿಮಾಡಿಲ್ಲ ? ಪ್ರಮೋಷನ್ ಕೊಡದಿರುವುದಕ್ಕೆ ಕಾರಣವೇನು ?

Sri H. V. KOUJALGI.—I do not know whether there are vacancies or not. If a separate question is put, I will answer. Further, to facilitate the I Division Clerks and the Second Division Clerks to get opportunities for promotion, the rules are amended. They are getting promotions according to amended rules.